ಆತಂಕ ಹಿರಿಯರನ್ನು ಕಾಡುತ್ತಿದ್ದರೆ, ಹೊಸ ಯುಗಕ್ಕೆ ಕಾಲಿಡುತ್ತಿದ್ದೇವೆ ಎನ್ನುವ ಸಂಭ್ರಮ ಯುವಕರಿಗೆ. ಈಗಂತೂ ಗೋಳೂರಲ್ಲಿ ಯುವಕರು ಫುಲ್ ಖುಷಿಯಲ್ಲಿದ್ದಾರೆ. ತೆಂಗಿನ ಕಾಯಿ ಕೀಳುವ ಕರಿಯ ವೃತ್ತಿಯನ್ನೇ ಬಿಡುವುದಾಗಿ ಹೇಳಿಕೊಂಡಿದ್ದಾನೆ. ಅವನೂ ಕೈಗಾರಿಕೆಯ ಹೂವಿನ ತೋಟದ ಖಾಯಂ ನೌಕರನಾಗುತ್ತಾನಂತೆ.

ಗೋಳೂರು ಈಗ ಜಾಗತಿಕ ಭೂಪಟದಲ್ಲಿ ಸ್ಥಾನ ಪಡೆಯಲಿದೆ. ಐದು ಸಾವಿರ ಎಕ್ರೆ ಪ್ರದೇಶದಲ್ಲಿ ಕೈಗಾರಿಕೆ ತಲೆ ಎತ್ತಲಿದೆ. ಹತ್ತು ಸಾವಿರ ಮಂದಿಗೆ ಉದ್ಯೋಗ ಸಿಗಲಿದೆ. ಇದಕ್ಕಾಗಿ ಗೋಳೂರಿನ ಗದ್ದೆ, ತೋಟಗಳ ಭೂಮಿ ಸ್ವಾಧೀನ ಕೆಲಸ ಮುಗಿದಿದೆ. ಒಂದು ಎಕ್ರೆಗೆ ಭೂ ನೋಂದಣಿ ಕಚೇರಿಯಲ್ಲಿನ ದರಕ್ಕಿಂತ ನಾಲ್ಕು ಪಟ್ಟು ಹೆಚ್ಚು ದರ ನಿಗದಿ ಮಾಡಿರುವುದರಿಂದ ಎಲ್ಲರಿಗೂ ಖುಷಿಯಿದೆ. ನಾಣಿ ಅಮ್ಮ, ಅವರೊಂದಿಗೆ ಇನ್ನಷ್ಟು ಮಂದಿ ತಕರಾರು ತೆಗೆದಿದ್ದಾರೆ. ಭೂಮಿ ಕಳಕೊಳ್ಳುವವರಿಗೆ ಮನೆಗೊಬ್ಬರಿಗೆ ಅದೇ ಕೈಗಾರಿಕೆಯಲ್ಲಿ ಉದ್ಯೋಗ ಕೊಡುತ್ತಾರೆ. ವಿದೇಶಿ ಕಂಪೆನಿಯಾಗಿರುವುದರಿಂದ ಕೈತುಂಬಾ ಸಂಬಳ ಗ್ಯಾರಂಟಿ ಎನ್ನುವ ಸಂತೃಪ್ತಿ ಯುವಕರಿಗೆ. ವಸತಿ ಇಲ್ಲದವರಿಗೆ ಕೈಗಾರಿಕೆಯವರೇ ಸ್ವಂತ ಖರ್ಚಿನಿಂದ ಕಾಲನಿ ನಿರ್ಮಿಸಲಿದ್ದಾರೆ. ಕಾಲನಿಯೊಳಗೆ ವಿಡಿಯೊದಲ್ಲಿ ನೋಡಿದಂತೆ ನೂರು ಅಡಿ ರಸ್ತೆಗಳನ್ನು ನಿರ್ಮಿಸಲಾಗುತ್ತದೆ. ಅಲ್ಲೇ ಸ್ಟೇಟ್, ಸೆಂಟ್ರಲ್ ಸಿಲೆಬಸ್ ಶಾಲೆ ತೆರೆಯುತ್ತಾರೆ. ಆಟದ ಮೈದಾನ, ಉದ್ಯಾನವನ, ಮಕ್ಕಳಿಗೆ ರಿಕ್ರಿಯೇಷನ್ ಕ್ಲಬ್ ತೆರೆಯುತ್ತಾರೆ. ಈ ಬಗ್ಗೆ ಸ್ವತಃ ಎಂಎಲ್ಎ ಸಂಪತ್ ಕುಮಾರ್ ಆಸಕ್ತಿ ವಹಿಸಿರುವುದರಿಂದ ಯೋಜನೆ ಕಾಲಮಿತಿಯೊಳಗೆ ಕೈಗೂಡಲಿದೆ ಎನ್ನುವ ವಿಶ್ವಾಸ. ಆದ್ದರಿಂದಲೇ ಹೆಚ್ಚಿನವರು ಭೂಮಿ ಕೊಡಲು ತುದಿಗಾಲಲ್ಲಿ ನಿಂತಿದ್ದಾರೆ.

ಹಳೆ ತಲೆಮಾರಿನವರು ಮಾತ್ರ ಎಗರಾಡುತ್ತಿದ್ದರೂ ಅವರೇನು ಹೆಚ್ಚು ವರ್ಷ ಬಾಳಿ ಬದುಕುವವರಲ್ಲ, ನಾಳೆ ಬೀಳುವ ಮರಗಳು ಎನ್ನುವ ಸಮಾಧಾನದ ಮಾತನ್ನು ಎಂಎಲ್ಎ ಯುವಕರಿಗೆ ಹೇಳಿದ್ದಾರೆ. ಈಗಾಗಲೇ ಹಲವು ಬ್ಯಾಂಕ್‌ನವರು ಶಾಖೆ ತೆರೆಯಲು ಮುಂದೆ ಬಂದಿದ್ದಾರೆ. ಭೂಮಿ ಮಾರಿದ ಹಣವನ್ನು ಸುರಕ್ಷಿತವಾಗಿ ಠೇವಣಿ ಇಟ್ಟರೆ ಬರುವ ಬಡ್ಡಿಯಿಂದ ಜೀವನ ಸಾಗಿಸಲು ಅನುಕೂಲವೆಂದು ಬ್ಯಾಂಕಿನವರು ಅಂಕಿ ಅಂಶ ಸಹಿತ ಮಾಹಿತಿ ಕೊಟ್ಟುಹೋಗಿದ್ದಾರೆ. ಜನರಿಗೆ ವಿಶ್ವಾಸ ಬರುವ ಉದ್ದೇಶದಿಂದ ಎಂಎಲ್ಎ ತಮ್ಮ ಪತ್ನಿಯ ಹಿರಿತನದಲ್ಲಿ ಸಹಕಾರಿ ಸಂಘ ಸ್ಥಾಪನೆಗೂ ಮುಂದಾಗಿದ್ದಾರೆ. ಅಲ್ಲೂ ಹಣ ಠೇವಣಿ ಇಡಬಹುದು ಮತ್ತು ಬಡ್ಡಿ ಹೆಚ್ಚು ಕೊಡುತ್ತಾರೆ.

ಗೋಳೂರು ಈಗ ಭಾರೀ ಕೈಗಾರಿಕೆಗಳ ರಾಜಧಾನಿಯಾಗಿದೆ. ಗದ್ದೆ, ತೋಟಗಳು ಒಂದು ಕಾಲದಲ್ಲಿ ಇದ್ದವು ಎನ್ನುವುದೇ ಗೊತ್ತಾಗದಷ್ಟರ ಮಟ್ಟಿಗೆ ಕಟ್ಟಡಗಳು ತಲೆಯೆತ್ತಿವೆ. ಭೂಮಿ ಮಾರಿಕೊಂಡವರು ಲಕ್ಷಾಂತರ ರೂಪಾಯಿಗಳನ್ನು ಬ್ಯಾಂಕ್, ಸಹಕಾರಿ ಸಂಘದಲ್ಲಿ ಠೇವಣಿ ಇಟ್ಟಿದ್ದಾರೆ. ಅವರಿಗಾಗಿಯೇ ನಿರ್ಮಿಸಿಕೊಟ್ಟಿರುವ ಕಾಲನಿಯ ಸುಂದರ ಮನೆಗಳಲ್ಲಿ ವಾಸವಿದ್ದಾರೆ. ಮನೆ ಕಾಂಪೌಂಡ್‌ನೊಳಗೆ ಕಾರು, ಬೈಕ್‌ಗಳು ನಿಂತಿರುವುದು ಸರ್ವೆ ಸಾಮಾನ್ಯ. ಬಹುತೇಕ ಮಂದಿ ಕಾಲನಿಯ ಮನೆಯನ್ನೂ ಮಾರಿಕೊಂಡು ಪೇಟೆಗಳಿಗೆ ವಲಸೆ ಹೋಗಿದ್ದಾರೆ. ಈಗ ಗೋಳೂರಲ್ಲಿ ನಾಣಿಯ ಯಜಮಾನಿಕೆ ಇಲ್ಲ. ಸರ್ಕಲ್ ಇನ್ಸ್‌ಪೆಕ್ಟರ್ ದರ್ಜೆಯ ಪೊಲೀಸ್ ಠಾಣೆ ಇದೆ, ಅಲ್ಲೇ ಎಲ್ಲವೂ ಬಗೆಹರಿಯುತ್ತವೆ. ಮೂರು ಆಧುನಿಕ ಶೈಲಿಯ ಬಾರ್‌ಗಳಿವೆ. ಲೇಡಿಸ್ ಬಾರ್ ಕೂಡಾ ಇದೆ. ಡಿಸ್ಕೋ ನೃತ್ಯವಿರುವ ಬಾರ್ ಇಪ್ಪತ್ನಾಲ್ಕು ಗಂಟೆ ಸೇವೆಯಲ್ಲಿದೆ. ಇಲ್ಲಿ ಐಶ್ವರ್ಯ, ಬಿಂದು, ಶೀಲಾ, ಚಮೇಲಿ ಮುಂತಾದ ಸುರಸುಂದರಾಂಗನೆಯರು ಬಣ್ಣದ ಬೆಳಕಲ್ಲಿ ನೃತ್ಯ ಮಾಡುತ್ತಾರೆ. ಅದನ್ನು ನೋಡುತ್ತಾ ಕುಡಿದು ಮಜಾ ಮಾಡುವ ಯುವಕರು ನೋಟುಗಳನ್ನು ನೃತ್ಯಗಾರ್ತಿಯರತ್ತ ಎಸೆದು ಖುಷಿ ಪಡುತ್ತಾರೆ. ದೆಹಲಿ, ಮುಂಬೈನಂಥ ಮಹಾನಗರಗಳಲ್ಲಿ ಇರದಂಥ ಸುಂದರಿಯರನ್ನು ಗೋಳೂರಿನ ಯುವಕರು ಕಂಡು ಪುಳಕಗೊಳ್ಳುತ್ತಿದ್ದಾರೆ. ಸಿನಿಮಾ ಥಿಯೇಟರ್, ಬ್ಯೂಟಿ ಪಾರ್ಲರ್‌ಗಳು ಕೂಡಾ ಬಿಜಿಯಾಗಿವೆ. ಅಂತೂ ಸ್ವರ್ಗವೇ ಗೋಳೂರಿನ ಧರೆಗಿಳಿದಂತಾಗುತ್ತಿದೆ ಯುವಕರಿಗೆ. ಈಗ ಎಂಎಲ್ಎ ಸಂಪತ್ ಕುಮಾರ್ ಕೈಗಾರಿಕಾ ಮಂತ್ರಿಯಾಗಿದ್ದಾರೆ. ಗೋಳೂರಿನ ಅಭಿವೃದ್ಧಿಯ ಹರಿಕಾರ ಎನ್ನುವ ಬಿರುದಿನೊಂದಿಗೆ ನ್ಯೂ ಏಜ್ ಅಸೋಸಿಯೇಷನ್ ಭಾನುವಾರ ಅವರಿಗಾಗಿ ಭಾರೀ ಸನ್ಮಾನ ಸಭೆ ಆಯೋಜಿಸಿದೆ.

ಗೋಳೂರು ಚಿತ್ರಣವೇ ಬದಲಾಗಿದೆ. ಮನೆಗೊಬ್ಬರಿಗೆ ಉದ್ಯೋಗ ಕೊಡಲು ಕಂಪೆನಿ ಸಿದ್ಧವಿದೆ, ಆದರೆ ಈ ಊರಿನಲ್ಲಿ ಅವರ ಶೈಕ್ಷಣಿಕ ಅರ್ಹತೆಗೆ ಸೂಟ್ ಆಗುವ ಕೆಲಸಗಳಿಲ್ಲ. ಮಾನವೀಯತೆ ನೆಲೆಯಲ್ಲಿ ಕೆಲವರಿಗೆ ದಿನಗೂಲಿ ಕೆಲಸಕ್ಕೆ ನೇಮಕ ಮಾಡಿಕೊಂಡಿದ್ದಾರೆ. ಅಂಥವರಲ್ಲಿ ತೆಂಗಿನಕಾಯಿ ಕೀಳುವ ಕರಿಯನೂ ಒಬ್ಬ. ಕಾಲೇಜು ಪೂರ್ಣಗೊಳಿಸದ ನವೀನ್‌ಗೂ ಕೆಲಸ ಸಿಕ್ಕಿಲ್ಲ. ಅವನಿಗೂ ಈ ಬಗ್ಗೆ ಬೇಸರವಿಲ್ಲ. ಯಜಮಾನನಾಗಿದ್ದ ನಾಣಿ ಲೇಡಿಸ್ ಬಾರ್‌ನಲ್ಲಿ ಬಿಜಿ. ಡ್ಯಾನ್ಸರ್ ಚಮೇಲಿ ಜೊತೆ ಡೀಪ್ ಲವ್, ಅವನ ಮೊಬೈಲ್ ನಾಟ್ ರೀಚೆಬಲ್. ■

# ಖಾಲಿ ಬಾಟ್ಲಿ

■ ಚ.ಲಿಂಗರಾಜ ಸೊಟ್ಟಪ್ಪನವರ

ಪಾಂವ್..ಪಂವ್.. ಪಾಂವ್ ಪಂವ್.. ಶಬ್ದ ಕಿವಿಗೆ ಬೀಳುತ್ತಲೇ ನಾಲಿಗೆ ಜೊಲ್ಲು ಒಸರತೊಡಗಿತು. ಕಿವಿಗೂ ನಾಲಿಗೆಗೂ ಅಂತಹ ಅವಿನಾಭಾವ ಸಂಬಂಧ ಹೆಣೆದಿದ್ದು ಈ ಹಾರ್ನ್. ಅದು ಐಸ್‌ಕ್ರೀಮ್‌ನವನ ಹಾರ್ನ್.

ಮಧ್ಯಾಹ್ನ ಹನ್ನೊಂದು ಸಮೀಪಿಸುತ್ತಿದ್ದಂತೆ ಅದ್ಯಾವುದೊ ಕೇರಿಯಲ್ಲಿ ಬಿಲ್ಲಪ್ಪ ಶಿಗ್ಲಿಯಿಂದ ತಂದ ತಂಪನ್ನು ಸುರಿಯುತ್ತಿರುತ್ತಾನೆ. ಇಷ್ಟರಲ್ಲೆ ನಮ್ಮ ಕೇರಿಗೂ ಬರುತ್ತಾನೆ... ಹೀಗೆ ಪ್ರತಿ ಕೇರಿಯೂ ಬಿಲ್ಲಪ್ಪನನ್ನು ಕಾಯುತ್ತಿರುತ್ತದೆ. ಹತ್ತಿರದ ಸಂತೆ ಶಿಗ್ಲಿಯಿಂದ ಕಡ್ಡಿ ಐಸ್‌ಕ್ರೀಮ್‌ನ ಡಬ್ಬಿಯಲ್ಲಿ ತುಂಬಿಕೊಂಡು ಸೈಕಲ್ ಸವಾರಿ ಹೊರಡುವ ಬಿಲ್ಲಪ್ಪ ಕಲಿವಾಳ ಗುದ್ನಾಳ ಕಡಕೋಳ ಹಾಯ್ದು ನಮ್ಮೂರಿಗೆ ತಲಪುತ್ತಾನೆ. ಅದೂ ಮೊದಲು ಬರುವುದು ನಮ್ಮ ಕೇರಿಗೇನೆ. ಊರ ಹೊರಗಿನದ್ದು ನಮ್ಮ ಕೇರಿಯಾದ್ದರಿಂದ ನಮಗೆ ಈ ಸವಲತ್ತು ದೊರಕಿತ್ತು. ಇದು ನಮ್ಮ ಭಾಗ್ಯ ಎಂದೆ ತಿಳಿದಿದ್ದೆವು. ಬಹುಶಃ ಉಳಿದ ಎಲ್ಲರಿಗಿಂತ ಮೊದಲು ಸಿಗುತ್ತಿದ್ದದ್ದು ಇದೇ ಇರಬೇಕು.

ಬಿಲ್ಲಪ್ಪ ನಮ್ಮ ಮನಸ್ಸಾ ಅದಾನ.. ಅಂತ ಕೇರಿಯ ಜನ ಮಾತನಾಡಿದ್ದನ್ನು ಕೇಳಿ ಹಿಡಿಸಲಾರದಷ್ಟು ಸಂತೋಷವಾಗಿತ್ತು. ಊರಾನ್ ಮಂದಿ ಮುಂದ ಹೀಂಗಂತ.. ಅಂತಾ ಅನ್ನಾಕ ಹೋಗಬ್ಯಾಡ್ರೆಲೆ ಹುಡ್ಗ್ಯಾ.. ಹಿರಿಯರು ಎಚ್ಚರಿಸಿದ್ದರು. ಹೆಮ್ಮೆಗೆ ಅವನು ನಮ್ಮವನು ಅಂತ ಹೇಳಿ ಕೊಂಡರೆ, ಬಿಲ್ಲಪ್ಪ ನಮ್ಮ ಊರಿಗೆ ಕಾಲಿಡುವದು ಕಷ್ಟವಾಗುತ್ತದೆ ಎಂಬುದನ್ನು ಅರಿಯುವಷ್ಟು ತಿಳುವಳಿಕೆ ನಮಗಿತ್ತು. ನಮ್ಮವನೊಬ್ಬ ಕೈಮುಟ್ಟಿ ಎಲ್ಲರಿಗೂ ಐಸ್ ಕೊಡುತ್ತಾನೆ. ನಮ್ಮ ಎಂಜಲು ಪ್ರಸಾದವಾಯಿತು ಎಂಬ ವಿಲಕ್ಷಣ ಆನಂದ ನಮ್ಮದು. ಅದಕ್ಕೆ ಕಾರಣವಿತ್ತು. ಶಾಲೆಯಲ್ಲಿ ಬಿಸಿಯೂಟದ ಕೆಲಸಕ್ಕೆ ಯಲ್ಲವ್ವ ಯನ್ನು ಬಿಟ್ಟು ತಾಂಡೆದ ಠಾಕ್ರೀಯನ್ನು ತೆಗೆದುಕೊಂಡ ಊರ ಮಂದಿ ಬಗ್ಗೆ ನಮಗೆ ಸಿಟ್ಟಿತ್ತು.

ಬಿಲ್ಲಪ್ಪನಿಂದ ನಮಗೆ ಪಾಶನ್ನ ಪರಿಚಯ ಆಗಿತ್ತು. ಅವನ ಕಲರ್ ಕಲರ್ ಶರ್ಟ್ ಪ್ಯಾಂಟು. ಕೊರಳಿಗೆ ಬಿಗಿದು ಕಟ್ಟಿದ ಕೆಂಪು ಕರ್ಚೀಫ್. ಚುಟ್ಟಾ ಸೇದಿ ಹೊಗೆ ಉಗುಳುವ ಪರಿ.. ತುಟಿಯಂಚಿನಲ್ಲಿ ಚುಟ್ಟಾ ಇಟ್ಟು ಅತ್ತಿಂದಿತ್ತ ನಾಲಿಗೆಯಿಂದಲೇ ಆಟ ಆಡಿಸುವ ಸ್ಟೈಲ್.. ಒಂದೇ ಕಾಲಿನಿಂದ ಸೈಕಲ್ ಏರಿ ಅಷ್ಟು ದೂರ ಸಾಗುವದು..ಈ ಎಲ್ಲವೂ ಬಿಲ್ಲಪ್ಪನನ್ನು ಹೀರೊ ಆಗಿಸಿದ್ದವು.

'ಸೆಕಲ್ಲ ತುಳ್ಳುಳ್ದ ತೊಡ್ಡು ಬಾತ ಹೊಕ್ಕಾವು..ಆ ಸೀಟಿನ ಏಣು ವತ್ತಿವತ್ತಿ ಬಿಲ್ಲಂದು ಗಂಡ ನರಾನ ಹೊಸದ ಹೋಗೆತಿ.. ಪಾಪ..ಅದಕಾ ಇಷ್ಟ್ ದಿವ್ಸ ಆದ್ರೂ ಮಕ್ಳ ಆಗಿಲ್ಲ..' ಹೀಗೆ ಜನರು ಬಿಲ್ಲಪ್ಪನ ಬಗ್ಗೆ ಮಾತನಾಡಿಕೊಳ್ಳುತ್ತಿದ್ದರು. ಅವರ ಮಾತಿನ ಅರ್ಥ ತಿಳಿಯಲಿಲ್ಲವಾದರೂ, ಈ ಐಸ್ ಮಾರಾಟ ಮಾಡುವುದರಿಂದ ಅವನಿಗೇನೊ ತೊಂದರೆಯಾಗಿದೆ ಅಂತಾ ಗೊತ್ತಾಯಿತು. ಹೀಗೆ ಸೈಕಲ್ ತುಳಿಯುತ್ತ ಊರೂರಿಗೆ ಎಣ್ಣೆ ಮಾರುತ್ತಿದ್ದ ಮುದ್ದಪ್ಪ ಶೆಟ್ಟರಿಗೂ ನರದ ಸಮಸ್ಯೆ ಇರುವ ಬಗ್ಗೆ ನಾವು ಮೊದಲೆ ಕೇಳಿದ್ದೆವು. ಆದ್ದರಿಂದ ಬಿಲ್ಲಪ್ಪನ ಸಂಗತಿ ವಿಶೇಷವೆನಿಸಲಿಲ್ಲ.

ಬಿಲ್ಲಪ್ಪ ದೂರ ಇರುವಾಗಲೆ ಹಾರ್ನ್‌ನ ಹೊಟ್ಟೆ ಹಿಚುಕುತ್ತಿದ್ದ. ಅದು ಚೀರುತ್ತಲೆ ಇಲ್ಲಿ ಸಂದಿಗೊಂದಿಯಲ್ಲಿನ ಬಾಟಲಿಗಳು ಹೊರಬರುತ್ತಿದ್ದವು. ಒಂದು ಬಾಟಲಿಗೆ ಒಂದು ಐಸ್ ಸಿಗುತ್ತಿತ್ತು.ಅಪ್ಪ ಅಜ್ಜ ಅಮ್ಮ ಕಾಕಾ ದೊಡ್ಡಪ್ಪ ಕುಡಿದು ಬಿಸಾಡಿದ ಬಾಟಲಿಗಳು ನಮಗೆ ಆಸ್ತಿಯಂತೆ ಕಾಣುತ್ತಿದ್ದವು. ಅವರು ಕುಡಿಯುವುದನ್ನೇ ಕಾದಿದ್ದು ಖಾಲಿಯಾದ ನಂತರ